ಓ ಎಸ್ **501/23**

ಪಿ ಡಬ್ಲ್ಯೂ **-1**

**ದಿಃ 04.03.2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಜೆ ಪಿ ವಕೀಲರಿಂದ ಃ

ನನ್ನ ತಂದೆಯವರು ಊರಿನಲ್ಲಿರುವ ಮನೆಯನ್ನು ಸೂರ್ಯ ಹುಟ್ಟುವ ಕಡೆಗೆ ಬರುವ ಭಾಗವನ್ನು ಪಡೆದಿರುತ್ತಾರೆ. ಸದರಿ ನಮ್ಮ ತಂದೆಯವರು ಪಡೆದುಕೊಂಡಿರುವ ಮನೆ ಸುಮಾರು 6 ಅಂಕಣ ಇರುತ್ತದೆ ಎಂದರೆ ಸರಿ. ಉಳಿದ ಪ್ರತಿವಾದಿಗಳು ಸುಮಾರು 8 ಅಂಕಣಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಇದ್ದ ಮನೆಗೆ 58/11 ಎಂದು ನಂಬರ್ ನೀಡಲಾಗಿತ್ತು ಎಂದರೆ ಸರಿ. ಮಾರೇಗೌಡರಿಗೆ 59/12 ಎಂದು ನಂಬರ್ನೀಡಲಾಗಿತ್ತು ಎಂದರೆ ಸರಿ. ಮಾಯಪ್ಪರವರಿಗೆ 53/6 ಎಂದು ನಂಬರ್ ನೀಡಲಾಗಿತ್ತು ಎಂದರೆ ಸರಿ. ಸದರಿ ಮೇಲೆ ಹೇಳಿದ ನಂಬರ್ ಗಳ ಮನೆಯಲ್ಲಿ ಪ್ರತಿಯೊಬ್ಬರೂ ಅವರ ಕುಟುಂಬದ ಸಮೇತ ವಾಸವಿದ್ದರು ಎಂದರೆ ಸರಿ. ಇದೆಲ್ಲಾ ಸುಮಾರು 60 ವರ್ಷಗಳ ಹಿಂದೆ ನೀಡಲಾದ ನಂಬರ್ ಗಳು ಎಂದರೆ ಸರಿ. ಟ್ಯಾಕ್ಸ್ ಅಸೆಸ್ ಮೆಂಟ್ ನ್ನು ಸಾಕ್ಷಿಗೆ ತೋರಿಸಲಾಗಿ ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದರ ಮೇರೆಗೆ ಅವುಗಳನ್ನು ನಿಡಿ 3 ರಿಂದ 6 ಎಂದು ಗುರುತಿಸಲಾಯಿತು. ಅವರವರು ಸದರಿ ಮನೆಗಳಿಗೆ ಕಂದಾಯವನ್ನು ತುಂಬಿಕೊಂಡು ಬರುತ್ತಿದ್ದರು ಎಂದರೆ ಸರಿ. ಸದರಿ ಮೇಲೆ ಹೇಳಿದ ಮನೆಗಳನ್ನು ದಾವಾ ಸ್ವತ್ತಿನಲ್ಲಿ ಸೇರಿಸಲಾಗಿರುವುದಿಲ್ಲ ಎಂದರೆ ಸದರಿ ಭಾಗ ಆದ ಮೇಲೆ ಬಂದ ಮನೆಗಳನ್ನು ಸೇರಿಸಿರುತ್ತೇನೆ. ಸರ್ವೆ ನಂ 26/4 ಅಂದರೆ ಐಟಂ ನಂ.3ರಲ್ಲಿ 2 ಎಕರೆ ಎಂದು ತೋರಿಸಲಾಗಿರುತ್ತದೆ ಎಂದರೆ ಸಾಕ್ಷಿ ಭಾಗದ ಪಟ್ಟಿಯಲ್ಲಿ 3 ಎಕರೆ ಎಂದು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಭಾಗದ ಪತ್ರವನ್ನು ವಕೀಲರಿಗೆ ತೋರಿಸಿ ನಂತರ ವಾದ ಪತ್ರವನ್ನು ನಾನು ತಯಾರು ಮಾಡಿರುತ್ತೇನೆ ಎಂದರೆ ಸರಿ. ಸದರಿ ಐಟಂ ನಂಬರ್ 3, 3 ಎಕರೆ ಜಮೀನು ಇರುತ್ತದೆ ಎಂದು ತೋರಿಸಲು ಯಾವುದಾದರೂ ದಾಖಲಾತಿ ಇರುತ್ತದೆಯಾ ಎಂದರೆ ಸಾಕ್ಷಿ ಭಾಗ ಪತ್ರ ಇದೆ ಎಂದು ನುಡಿಯುತ್ತಾರೆ. ಸದರಿ ಭಾಗ ಪತ್ರ ನನ್ನ ಹತ್ತಿರ ಇರುತ್ತದೆ. ಸದರಿ ಭಾಗ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಭಾಗ ಪತ್ರ 1971ರಲ್ಲಿ ಆಗಿರುತ್ತದೆ. ಸದರಿ ಭಾಗಪತ್ರದಲ್ಲಿ ಆಗಿರುವ ಭಾಗ ಕ್ರಮಬದ್ದವಾಗಿ ಆಗಿರುತ್ತದೆಯಾ ಎಂದರೆ ಸಾಕ್ಷಿ ಕ್ರಮಬದ್ದವಾಗಿ ಭಾಗ ಆಗಿರುತ್ತದೆ ಎಂದು ನುಡಿಯುತ್ತಾರೆ.

ಐಟಂ ನಂಬರ್ 3 ರ ಮೇಲೆ ನಮ್ಮ ತಂದೆ ತಾವರಕೆರೆಯ ಎಲ್ ಎಸ್ ಸಿ ಎಸ್ ಲಿಮಿಟೆಡ್ ರವರ ಹತ್ತಿರ ದಿನಾಂಕಃ 04-08-1976ರಲ್ಲಿ ಸಾಲ ಪಡೆದಿರುತ್ತಾರೆ ಎಂದರೆ ಸರಿ. ಸದರಿ ಸಾಲ ಪಡೆಯಬೇಕಾದರೆ ವಿಭಾಗ ಆಗಿರುವ ಪತ್ರವನ್ನು ಬ್ಯಾಂಕಿಗೆ ನೀಡಿ ಸಾಲ ಪಡೆದಿದ್ದರಾ ಎಂದರೆ ಹೌದು ಸದರಿ ಪತ್ರವನ್ನು ಬ್ಯಾಂಕಿಗೆ ನೀಡಿ ಸಾಲ ಪಡೆದಿದ್ದರು ಎಂದು ನುಡಿಯುತ್ತಾರೆ. ಪ್ರತಿವಾದಿ 1 ಮತ್ತು 2ರವರು ಭಾಗ ಆಗಿರುತ್ತದೆ ನಮಗೆ ಸಾಲ ಕೊಡಲು ಅಭ್ಯಂತರ ಇರುವುದಿಲ್ಲ ಎಂದು ಬ್ಯಾಂಕಿಗೆ ಹೇಳಿದ ನಂತರ ಸದರಿ ಸಾಲವನ್ನು ನೀಡಲಾಗಿತ್ತು ಎಂದರೆ ಸರಿ. ಸದರಿ ಸಾಲವನ್ನು ಯಾರ ಕಾಲದಲ್ಲಿ ತೀರುವಳಿ ಮಾಡಿರುತ್ತಾರೆ ಎಂದರೆ ನಮ್ಮ ತಂದೆಯವರೇ ತೀರುವಳಿ ಮಾಡಿರುತ್ತಾರೆ.

ಮಾಯಪ್ಪರವರಿಗೆ ಇಬ್ಬರು ಹೆಣ್ಣು ಮಕ್ಕಳು, ಮೂರು ಜನ ಗಂಡು ಮಕ್ಕಳು ಇರುತ್ತಾರೆ. ಅವರು ಚನ್ನಮ್ಮ ಮತ್ತು ಜಯಲಕ್ಷ್ಮಮ್ಮ ಇಬ್ಬರು ಹೆಣ್ಣು ಮಕ್ಕಳು ಆಗಿರುತ್ತಾರೆ. ಅವರಿಗೆ ಪುಟ್ಟಸ್ವಾಮಯ್ಯ, ಮರಿಚನ್ನೇಗೌಡ ಮತ್ತು ನಾಗರಾಜು ರವರು ಗಂಡು ಮಕ್ಕಳು ಇರುತ್ತಾರೆ. ಚನ್ನಮ್ಮರವರು ಅವರ ತಂದೆಗೆ ಬಂದ ಭಾಗದ ಮೇಲೆ ಒಂದು ವಿಭಾಗ ಕೇಳಿ ದಾವೆಯನ್ನು ಹೂಡಿದ್ದರು ಎಂದರೆ ಸರಿ. ಸದರಿ ಚೆನ್ನಮ್ಮರವರು ಹೂಡಿದ್ದ ದಾವೆಯಲ್ಲಿ ನಮ್ಮ ತಂದೆಗೆ ಬಂದ ಆಸ್ತಿಗಳು ಮತ್ತು ಮಾರೇಗೌಡರಿಗೆ ಬಂದ ಆಸ್ತಿಗಳನ್ನು ಸೇರಿಸಲಾಗಿರಲಿಲ್ಲ ಎಂದರೆ ಸರಿ. ಸದರಿ ದಾವೆಯನ್ನು ಮಾಯಪ್ಪರವರಿಗೆ ಬಂದ ಆಸ್ತಿಗಳ ಮೇಲೆ ಮಾತ್ರ ಹೂಡಲಾಗಿತ್ತು ಎಂದರೆ ಸರಿ. ಸದರಿ ದಾವೆ ಒ ಎಸ್ 252/12 ಹಳೆ ನಂಬರ್, ಹೊಸ ಒ ಎಸ್ ನಂಬರ್ 536/14 ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ಮಾಯಪ್ಪರವರ ಮಗಳಿಗೆ ಭಾಗ ಕೊಡಬೇಕೆಂದು ತೀರ್ಮಾನ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯ ಅಂತಿಮ ತೀರ್ಪಿನ ಮೇಲೆ ಎಫ್ ಡಿ ಪಿ ನಂ. 23/17 ದ್ದನ್ನು ಹೂಡಲಾಗಿರುತ್ತದೆ ಎಂದರೆ ಸರಿ. ಸದರಿ ಎಫ್ ಡಿ ಪಿ ನಂ. 23/17ರಲ್ಲಿರುವ ಆಸ್ತಿಗಳು ನಮಗೂ ಸಂಬಂದ ಇರುವುದಿಲ್ಲ ಎಂದರೆ ಸಾಕ್ಷಿ ಆಸ್ತಿಗಳಿಗೆ ನನಗೆ ಸಂಬಂದ ಇರುವುದಿಲ್ಲ ನನಗೆ 1966ರಲ್ಲಿ ಮತ್ತು 1971ರಲ್ಲಿ ಆಗಿರುವ ವಿಭಾಗ ಪತ್ರದಂತೆ ಆಸ್ತಿ ಬರಬೇಕು ಅದನ್ನು ಕೊಟ್ಟರೆ ಸಾಕು ಎಂದು ನುಡಿಯುತ್ತಾರೆ.

ಈ ಸದರಿ ದಾವೆಯನ್ನು ಎಲ್ಲಾ ಆಸ್ತಿಗಳನ್ನು ಸೇರಿಸಿ ನಾನು ಹೂಡಿರುತ್ತೇನೆ. ನಾನು ವಾದಪತ್ರದ ಪ್ಯಾರಾ 6 ರಿಂದ 13ರಲ್ಲಿ ಹೇಳಲಾಗಿರುವ ವಿಷಯಗಳಿಗೆ ಯಾವುದೇ ಆಧಾರ ಇರುವುದಿಲ್ಲ ಎಂದರೆ ಸರಿ. ನಿಪಿ 4 ರ ಪಹಣಿಯ 4ನೇ ಪುಟದಲ್ಲಿ ಮಾರೇಗೌಡ ಮಾಯಪ್ಪ ಎಂದು ಪ್ರತ್ಯೇಕವಾಗಿ ನಮೂದಾಗಿರುತ್ತದೆ ಎಂದರೆ ಸರಿ. ನಿಪಿ5ರಲ್ಲಿ ಮಾಯಪ್ಪ, ಲಕ್ಷ್ಮಮ್ಮ, ಮಾರೇಗೌಡ ರವರ ಹೆಸರಿನಲ್ಲಿ ಪ್ರತ್ಯೇಕವಾದ ಖಾತೆ ನಂಬರ್ ಮತ್ತು ವಿಸ್ತೀರ್ಣವನ್ನು

ತೋರಿಸಲಾಗಿರುತ್ತದೆ ಎಂದರೆ ಸರಿ. ಸರ್ವೆ ನಂಬರ್ 57 ರ ಪಹಣಿಯಲ್ಲಿ ಮಾಯಪ್ಪರವರ ಹೆಸರು ಮತ್ತು ನಿಂಗಮ್ಮರವರ ಹೆಸರು ಪ್ರತ್ಯೇಕವಾಗಿ ತೋರಿಸಲಾಗಿರುತ್ತದೆ ಎಂದರೆ ಸರಿ. ಸದರಿ ಪ್ರತ್ಯೇಕವಾಗಿ ಹೆಸರುಗಳನ್ನು ನಿಪಿ 4 ರಿಂದ 6 ರಲ್ಲಿ ತೋರಿಸಲಾಗಿರುವುದು 1971ರ ವಿಭಾಗದಂತೆ ಎಂದರೆ ಸರಿ. ನಿಪಿ6ರಲ್ಲಿ ತೋರಿಸಲಾಗಿರುವ ನನ್ನ ತಾಯಿ ಎಂದರೆ ಸರಿ. ಸರ್ವೆ ನಂ 24/2 ರಲ್ಲಿ ನೀರು ಮುಳುಗಡೆಗೆ ಎಷ್ಟು ಜಮೀನು ಹೋಗಿರುತ್ತದೆ ಎಂದರೆ ಗೊತ್ತಿಲ್ಲ ಉಳಿದಿರುವುದು 3 ಎಕರೆ 24 ಗುಂಟೆ ಎಂದು ನುಡಿಯುತ್ತಾರೆ. ಸದರಿ 3 ಎಕರೆ 24ಗುಂಟೆಯಲ್ಲಿ ಮಾಯಪ್ಪರವರಿಗೆ 1 ಎಕರೆ 02 ಗುಂಟೆ ಖಾತೆಯಾಗಿರುತ್ತದೆ ಎಂದರೆ ಸರಿ. 1989 ರಿಂದ ಮಾಯಪ್ಪರವರ ಹೆಸರು ಸಾಗುವಳಿ ಕಲಂ ನಲ್ಲಿ ಮತ್ತು ಖಾತೆಯ ಕಲಂನಲ್ಲಿ ತೋರಿಸಲಾಗಿರುತ್ತದೆ ಎಂದರೆ ಸರಿ. ನಿಪಿ21 ವಿಭಾಗ ಪತ್ರದ ಪ್ರಕಾರ ಭಾಗ ಮಾಡಲಾಗಿರುವ ಎಂ ಆರ್ ಎಂದರೆ ಸರಿ. ನಾನು ಹಾಜರುಮಾಡಿರುವ ಮ್ಯುಟೇಷನ್ ಗಳಲ್ಲಿ 1971ರ ಭಾಗ ಪತ್ರದಂತೆ ಖಾತೆ ಬದಲಾವಣೆ ಆಗಿರುವುದನ್ನು ಸೂಚಿಸಲಾಗಿರುತ್ತದೆ ಎಂದರೆ ಸರಿ.

ನಿಪಿ23ರಲ್ಲಿ ನನ್ನ ತಾಯಿ ನಿಂಗಮ್ಮರವರು ಮರಿಚನ್ನಯ್ಯರವರಿಂದ ಸರ್ವೆ ನಂಬರ್ 57ರಲ್ಲಿ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಅದೇ ರೀತಿ ಸರ್ವೆ ನಂ 24/2 ರಲ್ಲಿ ಲಕ್ಷ್ಮಮ್ಮ, ಮಾರೇಗೌಡ ಮತ್ತು ಅಕ್ಕಮಾರಮ್ಮರವರ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ಸರಿ.

ಮಾರೇಗೌಡರವರು ಅವರಿಗೆ ಬಂದ ಆಸ್ತಿಯಲ್ಲಿ ತೆಂಗಿನ ತೋಟವನ್ನು ಮಾಡಿಕೊಂಡು ಇರುತ್ತಾರೆ. ಸದರಿ ತೋಟವನ್ನು ಸುಮಾರು 10 ವರ್ಷಗಳ ಹಿಂದೆ ಮಾಡಿರುತ್ತಾರೆ. ಮಾರೇಗೌಡರು ಸದರಿ ಜಮೀನಿನಲ್ಲಿ ಮನೆಯನ್ನು ಕೂಡ ಕಟ್ಟಿಕೊಂಡಿರುತ್ತಾರೆ. ನಾನು ಕೂಡ ನನ್ನ ಜಮೀನಿನಲ್ಲಿ ಮನೆ ಕಟ್ಟಿಕೊಂಡಿರುತ್ತೇನೆ ಎಂದರೆ ಸರಿ. ನಾನು ಬೆಂಗಳೂರಿನಲ್ಲಿ ಕಾಚೋಹಳ್ಳಿಯಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುತ್ತೇನೆ ಎಂದರೆ ಸರಿ. ನಾನು ಡ್ರೈವರ್ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ.

ನಾನು 1966 ಮತ್ತು 1971 ಭಾಗವನ್ನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ನನ್ನ ತಂದೆಯವರು 2016ರಲ್ಲಿ ತೀರಿಕೊಂಡಿರುತ್ತಾರೆ. ಅವರು ತೀರಿಕೊಂಡ ಸಮಯದಲ್ಲಿ ಅವರಿಗೆ 70 ವರ್ಷ ವಯಸ್ಸಾಗಿತ್ತು. ನನ್ನ ತಂದೆ ತೀರಿಕೊಳ್ಳುವ ಮುಂಚೆ ಸದರಿ ವಿಭಾಗವನ್ನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ನಾನು ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸುಳ್ಳು. ನಾನು ಸುಳ್ಳು ದಾವೆಯನ್ನು ಹಾಕಿರುವ ಕಾರಣಕ್ಕೆ ನಾನು ಅರ್ಹನಾಗಿರುವುದಿಲ್ಲ ಎಂದರೆ ಸುಳ್ಳು.

ಮಾನ್ಯ ನ್ಯಾಯಾಲಯದ ಮುಂದೆ ಇರುವ ವ್ಯಕ್ತಿ ನನ್ನ ತಮ್ಮ ಗಂಗಾಧರ್ ಆಗಿರುತ್ತಾರೆ ಅವರು 3ನೇ ವಾದಿ ಎಂದರೆ ಸರಿ. ಅವರು ಕೂಡ ಲಾರಿ ಡ್ರೈವರ್ ಆಗಿರುತ್ತಾರೆ. ಅವರು ಕೂಡ ಪ್ರತಿದಿನ ನ್ಯಾಯಾಲಯಕ್ಕೆ ಬರುತ್ತಾರೆ ಎಂದರೆ ಸರಿ. ನಾನು ಸುಳ್ಳು ದಾವೆಯನ್ನು ಹೂಡಿರುತ್ತೇನೆ ಮತ್ತು ದಾವೆಯಲ್ಲಿ ಕೇಳಿರುವ ಪರಿಹಾರಗಳಿಗೆ ನಾನು ಅರ್ಹನಾಗಿರುವುದಿಲ್ಲ ಎಂದರೆ ಸುಳ್ಳು.

**ಮರುವಿಚಾರಣೆ ಃ ಇಲ್ಲ**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**